

# ನಂಬರ್ ಹಿಂದೆ ಬೀಳಲ್ಲ ಮೋಕ್ಷಾ

'ಕೋಟೆ' ಸಿನಿಮಾ ಮೂಲಕ ಮನೆ ಮಾತಾಗಿರುವ ನಟಿ ಮೋಕ್ಷಾ ಕುಶಾಲ್, ಮತ್ತೊಂದು ಸಿನಿಮಾಗೆ ಸಹಿ ಹಾಕಿದ್ದಾರೆ. ಸಿಂಪಲ್ ಸುನಿ ನಿರ್ದೇಶನದ 'ಮೋಡ ಕವಿದ ವಾತಾವರಣ' ಸಿನಿಮಾದಲ್ಲಿ ಅಭಿನಯಿಸುತ್ತಿದ್ದು, ಈ ಸಿನಿಮಾ ತಮಗೆ ಉತ್ತಮ ಅವಕಾಶವಾಗಿರುವುದಾಗಿ ಹೇಳಿಕೊಂಡಿದ್ದಾರೆ.

ಸಿನಿಮಾಗಳ ಆಯ್ಕೆ ಕುರಿತು ಮಾತನಾಡಿರುವ ಅವರು, ''ಕೋಟೆ' ಸಿನಿಮಾದಿಂದ ನನ್ನ ಕರಿಯರ್ ಬಹಳ ಉತ್ತಮವಾಗಿ ಆರಂಭವಾಯಿತು. ಒಂದರ ಮೇಲೆ ಒಂದರಂತೆ ಸಿನಿಮಾ ಮಾಡಿಬಿಡಬೇಕು ಎಂಬ ಧಾವಂತ ನನಗಿಲ್ಲ. ಸ್ಕ್ರಿಪ್ಟ್ ಜೊತೆ ಅಥವಾ ಸ್ಕ್ರೀನ್ ಮೇಲೆ ನನ್ನ ಪಾತ್ರದ ಜೊತೆ ಕಾಂಪ್ರಮೈಸ್ ಮಾಡಿಕೊಳ್ಳಲು ನಾನು ನಿರಾಕರಿಸುತ್ತೇನೆ'' ಎಂದು ಹೇಳಿದ್ದಾರೆ.

ತಾವು ಅಭಿನಯಿಸುತ್ತಿರುವ 'ಮೋಡ ಕವಿದ ವಾತಾವರಣ' ಸಿನಿಮಾವನ್ನು ತಾವು ಒಪ್ಪಿದ ಹಿಂದಿನ ಕಾರಣವನ್ನು ಹೇಳುತ್ತಾ, 'ಸುನಿಲ್ ಸರ್ ಅವರ ಕಥೆಗಳು ಎಂದಿಗೂ ಆಳವಾಗಿರುತ್ತವೆ. ಅದರಲ್ಲೂ ಮಹಿಳಾ ಪಾತ್ರಗಳನ್ನು ಬರೆಯುವಾಗ ತೂಕದ ನಿರೂಪಣೆ ಇರುತ್ತದೆ. ಅದನ್ನೇ ನಾನು ಇಷ್ಟು ದಿನ ಹುಡುಕುತ್ತಿದ್ದೆ ಕೂಡ. ಅವರ ವಿಶಿಷ್ಟ ಕಥಾ ನಿರೂಪಣಾ ಶೈಲಿ, ಡೈಲಾಗ್‌ಗಳು ನನ್ನನ್ನು ಈ ಸಿನಿಮಾದ ಭಾಗವಾಗಲು ಪ್ರೇರೇಪಿಸಿದವು. ಚಿಕ್ಕಮಗಳೂರಿನಂಥ ಸುಂದರ ವಾತಾವರಣದಲ್ಲಿ ಸಿನಿಮಾ ಚಿತ್ರೀಕರಿಸಲಾಗಿದ್ದು, ಇದು ಖಂಡಿತ ಪ್ರೇಕ್ಷಕರ ಮನಮುಟ್ಟಲಿದೆ' ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

''ನನಗೆ ಗುಣಮಟ್ಟದ ಪ್ರಾಜೆಕ್ಟ್‌ಗಳು ಸಿಗುತ್ತಿರುವುದಕ್ಕೆ ಖುಷಿಯಿದೆ. ಹೊಸಬರಿಗೆ ಇಂಥ ಅವಕಾಶಗಳು, ಅನುಭವಗಳು ಸಿಗುವುದು ಬಹಳ ಅಪರೂಪ. ಇದು ನನ್ನಲ್ಲಿನ ಆತ್ಮವಿಶ್ವಾಸವನ್ನು ಗಟ್ಟಿಗೊಳಿಸಿದೆ. 'ತಾಳ್ಮೆ ವಹಿಸಿ ಕಾದು ನೋಡು' ಎಂಬುದೇ ನನ್ನ ಸ್ಟ್ರಾಟೆಜಿ. ನನಗೆ ಸಂತೃಪ್ತಿ ನೀಡುವಂಥ ಪಾತ್ರಗಳನ್ನು ಪಡೆಯಲು ಇದು ಒಂದು ಕಾರಣವೂ ಆಗಿದೆ. ನನಗೆ ನಂಬರ್‌ಗಿಂತ ಜನರಿಗೆ ಮೆಚ್ಚುಗೆಯಾಗುವಂಥ ಸಿನಿಮಾಗಳನ್ನು ನೀಡುವ ಆಸೆ'' ಎಂದು ಹೇಳಿದ್ದಾರೆ.



# ಅನೂಪ್ ಅನುಭವದಲ್ಲಿ ನಟನೆ

ಸಿನಿಮಾ ನಿರ್ದೇಶಕ ಅನೂಪ್ ಭಂಡಾರಿ, 'ಜಸ್ಟ್ ಮ್ಯಾರೀಡ್' ಸಿನಿಮಾದಲ್ಲಿ ಅಭಿನಯಿಸಿದ್ದು, ನಟನೆಯ ಅನುಭವ ಹೇಗಿತ್ತು ಎಂಬುದರ ಕುರಿತು ಚುಟುಕಾಗಿ ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ.

'ನಟನೆ ಎಂಬುದು ಹೊಸ ಅನುಭವ ನೀಡಿತು. ಸಿನಿಮಾದಲ್ಲಿ ನಟಿಸುವಾಗ ಕ್ಯಾರವಾನ್, ಅಸಿಸ್ಟೆಂಟ್‌ಗಳು, ಲಂಚ್ ಬ್ರೇಕ್, ವ್ಯಾನ್‌ನಲ್ಲಿ ಸೀರೀಸ್ ನೋಡುತ್ತಾ ಕುಳಿತುಕೊಳ್ಳುವುದು ಇವೆಲ್ಲ ಹೊಸತೆನಿಸಿತ್ತು. ನಿರ್ದೇಶಕನಾಗಿದ್ದಾಗ ಈ ರೀತಿ ಇರಲು ಸಾಧ್ಯವೇ ಇರುತ್ತಿರಲಿಲ್ಲ' ಎಂದು ತಮಾಷೆಯಾಗಿ ಮಾತನಾಡಿದ್ದಾರೆ.

ಈ ಹಿಂದೆ ತಮ್ಮದೇ ಸಿನಿಮಾದಲ್ಲಿ ಅನೂಪ್ ಬಣ್ಣ ಹಚ್ಚಿದ್ದರು. ಆನಂತರ ಬಾಬಿ ಸಿ.ಆರ್. ಅವರ ನಿರ್ದೇಶನದ 'ಜಸ್ಟ್ ಮ್ಯಾರೀಡ್' ಸಿನಿಮಾದಲ್ಲಿ ಅನೂಪ್ ನಟಿಸುತ್ತಿದ್ದಾರೆ. ನಟನೆ ಮಾಡುವ ಅವಕಾಶ ಹೇಗೆ ಕೂಡಿಬಂತು ಎಂಬುದರ ಕುರಿತು ಸಣ್ಣದೊಂದು ಸಂಗತಿಯನ್ನೂ ಅವರು ಹಂಚಿಕೊಂಡಿದ್ದಾರೆ.

''ನಾನಾಗ ಅಜನೀಶ್ ಲೋಕನಾಥ್ ಅವರ ಸ್ಟುಡಿಯೊದಲ್ಲಿ ಸಿನಿಮಾವೊಂದಕ್ಕೆ ಸಂಗೀತ ನಿರ್ದೇಶನದಲ್ಲಿ ತೊಡಗಿಕೊಂಡಿದ್ದೆ. ಅಲ್ಲಿಗೆ ಬಂದ ಬಾಬಿ ಅವರು, 'ಹಲೊ ಡಾ. ಆನಂದ್' ಎಂದು ಕರೆದರು. ನನ್ನನ್ನು ಹಾಗೆ ಕರೆದಿದ್ದು ನೋಡಿ ಅಚ್ಚರಿಯಾಯಿತು. ನಾನು ತಕ್ಷಣವೇ ಅವರಿಗೆ ಕೇಳಿದೆ, ಏಕೆ ಈ ರೀತಿ ಕರೆಯುತ್ತಿದ್ದೀರಿ ಎಂದು. ಆಗ ತಮ್ಮ ಆಲೋಚನೆಯನ್ನು ಹಂಚಿಕೊಂಡರು. ಆ ಸಿನಿಮಾದಲ್ಲಿ ನಾನೊಂದು ಪಾತ್ರ ನಿಭಾಯಿಸಬೇಕೆಂಬುದನ್ನು ಅವರು ಈ ರೀತಿ ವ್ಯಕ್ತಪಡಿಸಿದ್ದರು'' ಎಂದು ವಿವರಿಸಿದ್ದಾರೆ ಅನೂಪ್.

ಶೈನ್ ಶೆಟ್ಟಿ, ಅಂಕಿತಾ ಅಮರ್ ನಟನೆಯ 'ಜಸ್ಟ್ ಮ್ಯಾರೀಡ್' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ದೇವರಾಜ್, ಅಚ್ಯುತಕುಮಾರ್, ಮಾಳವಿಕಾ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರವಾಲ್, ಶ್ರೀಮಾನ್, ರವಿಶಂಕರ್ ಗೌಡ, ರವಿ ಭಟ್ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.